DAA – 530

**ಪ್ರಥಮ ಬಿ.ಎ. ಪದವಿ ಪರೀಕ್ಷೆ, ಸಪ್ಟೆಂಬರ್/ಅಕ್ಟೋಬರ್ 2012**
**ಅಂಚೆ ಮತ್ತು ತೆರಪಿನ ಶಿಕ್ಷಣ**
**(ಹೊಸಬರಿಗೆ / ಹಳೆಬರಿಗೆ)**
**Directorate of Distance Education**
**ಬಸವ ತತ್ವ**
**ಪತ್ರಿಕೆ ೧ : ಬಸವ ತತ್ವ ಪ್ರದೀಪಿಕೆ**

ಸಮಯ : 3 ಗಂಟೆಗಳು ಗರಿಷ್ಠ ಅಂಕಗಳು : 70/80

***ಸೂಚನೆಗಳು :*** *1) **30** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **70** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*
*2) **20** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **80** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*
*3) **ವಿಶೇಷ ಸೂಚನೆ : ಹೊಸಬರು ಇ** – ವಿಭಾಗದ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು.*

**ವಿಭಾಗ – ಎ**

I. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **(2×5=10)**

ಅ) ತನ್ನ ಸತಿಯ ಸಂಗವಲ್ಲದೆ ಪರಸತಿಯರ ಮುಟ್ಟದಿರುವದೇ ಪಂಚಾಂಗ,
ತನ್ನ ಇಷ್ಟಲಿಂಗವಲ್ಲದ್ದಕ್ಕೆ ಕೈಯ ಮುಗಿಯದಿರುವದೇ ಪಂಚಾಂಗ
ಜಾತಿ ಸೂತಕ, ಜನನ ಸೂತಕ, ಉಚ್ಚಿಷ್ಟ ಸೂತಕ, ಮೃತ ಸೂತಕ, ರಜ ಸೂತಕ
ಈ ಪಂಚಸೂತಕವರಿದ ಶರಣರು ಕೇಳುವರಾಗಿ.

ಆ) ನೀರ ಕಂಡಲ್ಲಿ ಮುಳುಗುವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ, ಒಣಗುವ ಮರವ
ಮೆಚ್ಚಿದವರು ನಿಮ್ಮನೆತ್ತಬಲ್ಲರು
ಕೂಡಲ ಸಂಗಮದೇವ.

ಇ) ಲಂಚವಂಚನೆಗೆ ಕೈಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನ ವಸ್ತ್ರ ಬಿದ್ದಡೆ ಕೈ ಮುಟ್ಟಿ ಎತ್ತಿಕೊಂಡೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ನೀವಿಕ್ಕಿದ ಭಿಕ್ಷೆಯಲ್ಲಿಪ್ಪೆನಯ್ಯಾ
ಶಂಭು ಜಕ್ಕೇಶ್ವರಾ.

P.T.O.

## ವಿಭಾಗ – ಬಿ

II. ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×10=20)**

ಅ) ಬಸವೋತರದಲ್ಲಿದ್ದ ಜಾತಿಪದ್ಧತಿ ಮತ್ತು ಶಿಕ್ಷಣದ ಪದ್ಧತಿಯನ್ನು ವಿವರಿಸಿ.

ಆ) ಬ್ರಹ್ಮಚರ್ಯದ ಮಹತ್ವ ಮತ್ತು ಪಾಲನೆಯ ನಿಯಮಗಳನ್ನು ವಿವರಿಸಿ.

ಇ) ಆರ್ಥಿಕ ಅಸಮಾನತೆಗೆ ಕಾರಣಗಳನ್ನು ತಿಳಿಸಿ.

## ವಿಭಾಗ – ಸಿ
## (ನಿಜಾಚರಣೆ)

III. ಯಾವುದಾದರೂ **ಎರಡು** ಸಂದರ್ಭಗಳ ಸರಳ ಆಚರಣೆಯನ್ನು ವಿವರಿಸಿ : **(2×5=10)**

ಅ) ಪ್ರಾಥಮಿಕ (ಗರ್ಭ) ಸಂಸ್ಕಾರ

ಆ) ನಿಶ್ಚಿತಾರ್ಥ ಕಾರ್ಯಕ್ರಮ

ಇ) ಸೊಸೆಯನ್ನು ಮನೆ ತುಂಬಿಸಿಕೊಳ್ಳುವುದು.

## ವಿಭಾಗ – ಡಿ
## (ವಿಶ್ವ ಧರ್ಮಗಳು ಮತ್ತು ಧರ್ಮಗಳ ಸಮನ್ವಯ)

IV. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ : **(3×10=30)**

ಅ) ಉಪನಿಷತ್ತುಗಳು ಎಂದರೇನು ? ಅವುಗಳ ತಾತ್ವಿಕ ಬೋಧನೆಯನ್ನು ವಿವರಿಸಿ.

ಆ) ವೀರಶೈವ ಧರ್ಮವು ತತ್ವನಿಷ್ಠವಾಗಿದೆ, ವ್ಯಕ್ತಿ ನಿಷ್ಠವಾಗಿಲ್ಲ ವಿವರಿಸಿ.

ಇ) ಜೈನಧರ್ಮದ ನೀತಿಶಾಸ್ತ್ರವನ್ನು ವಿವರಿಸಿ.

ಈ) ಬೌದ್ಧ ಧರ್ಮದ ಅಷ್ಟಾಂಗ ಮಾರ್ಗವನ್ನು ವಿವರಿಸಿ.

## ವಿಭಾಗ – ಇ

**ವಿಶೇಷ ಸೂಚನೆ** : **ಹೊಸಬರು** ಈ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು. **(1×10=10)**

ಅ) ಕ್ರೈಸ್ತ ಧರ್ಮದ ಪ್ರಮುಖ ಬೋಧನೆಯನ್ನು ವಿವರಿಸಿ.

---